Construction of Quarters for Officials at Biligere

511 Sri V. L. SHIVAPPA (Tiptur).—

Will the Minister for Public Works be pleased to state.—

(*a*) Whether on the request of the Village Panchayat Chairman, Biligere (Tiptur Taluk) and others, there was a proposal, as early as February 1966 to build official quarters at Biligere Hobli Headquarters;

(*b*) the action taken in this regard;

(*c*) the reasons that prompted the concerned authorities for deferring the construction?

Sri K. LAKKAPPA (Minister for Public Works).—

(*a*) Yes.

(*b*) and (*c*) The work could not be taken up for execution either under "Rental Housing Scheme" or "Construction of Quarters for Non-Gazetted Officers at District and Taluk Headquarters" as Biligere is only a village, and since there was no requisition for the construction of quarters from any Department of Government under "50 Public Works- Buildings- Minor" of that Department.

ಶ್ರೀ ವಿ. ಎಲ್. ಶಿವಪ್ಪ.—ಬಿಳಿಗೆರೆ ವಿಚಾರದಲ್ಲಿ 1966-67ನೇ ಇಸವಿಯಲ್ಲಿ ಚೀಫ್ ಇಂಜಿನಿಯರಿಂದ ಸೂಪರಿಂಟೆಂಡಿಂಗ್ ಇಂಜಿನಿಯರಿಗೆ ಒಂದು ಕಾಗದ ಹೋಗಿದೆ. 1966-67ನೇ ಇಸವಿಯಲ್ಲಿ ಪ್ರೋಗ್ರಾಂ ವರ್ಕ್ಸ್‌ನಲ್ಲಿ ಈ ಕೆಲಸವನ್ನು ತೆಗೆದುಕೊಳ್ಳಬೇಕೆಂಬ ವಿಚಾರದಲ್ಲಿ ಅದರ ಬಗ್ಗೆ ಪ್ರಪೋಸ್ ಆಗಿ ಬಂದಿದೆಯೇ ಸ್ವಾಮಿ?

ಶ್ರೀ ಕೆ. ಲಕ್ಕಪ್ಪ.—ಪ್ರಪೋಸಲ್ಸ್ ಆಗಿ ಸರ್ಕಾರಕ್ಕೆ ಬಂದಿವೆ. ಆದರೆ ರೆಂಟಲ್ ಸ್ಕೀಂ ಪ್ರಕಾರ ಇಲ್ಲವೇ ಎನ್. ಜಿ. ಓ. ಗಳಿಗೆ ಕಟ್ಟಡಗಳನ್ನು ಕಟ್ಟಿಕೊಡತಕ್ಕ ಸ್ಕೀಂ ಪ್ರಕಾರ ಏನಿದ್ದರೂ ಜಿಲ್ಲಾ ಕೇಂದ್ರದಲ್ಲಿ ಇಲ್ಲವೇ ತಾಲ್ಲೂಕು ಕೇಂದ್ರದಲ್ಲಿ ಕಟ್ಟಡಗಳನ್ನು ಕಟ್ಟಲು ಸಾಧ್ಯವಿದೆ. ಬಿಳಿಗೆರೆ ತಾಲ್ಲೂಕು ಕೇಂದ್ರವೂ ಅಲ್ಲ, ಜಿಲ್ಲಾ ಕೇಂದ್ರವೂ ಅಲ್ಲ. ಅದು ಒಂದು ಹಳ್ಳಿ. ಈ ಕಾರಣದಿಂದ ಅಲ್ಲಿ ಕ್ವಾರ್ಟರ್ಸ್ ಕಟ್ಟಿಸುವುದಕ್ಕೆ ಸಾಧ್ಯವಿಲ್ಲ ಎನ್ನುವುದನ್ನು ವ್ಯಕ್ತಪಡಿಸಿದೆ. ಆದರೂ ಸ್ಪೆಷರ್ ಕೇಸಾಗಿ ಇದನ್ನು ಪರಿಗಣಿಸಬೇಕು ಮತ್ತು ಹಾಗೆ ಸಾಧ್ಯವಿದ್ದರೆ ಕಟ್ಟಿಸಿ ಎಂದು ಸರ್ಕಾರಕ್ಕೆ ಬರೆದಿದ್ದಾರೆ. ಅಲ್ಲಿ ಕ್ವಾರ್ಟರ್ಸ್ ಕಟ್ಟತಕ್ಕ ಅವಕಾಶವಿದೆ, ಅದನ್ನು ಕಟ್ಟಿ ಎನ್ನುವ ಮನವಿ ಪಬ್ಲಿಕ್ ವರ್ಕ್ಸ್ ಇರಾಖೆಯಿಂದ ಬಂದ ಪಕ್ಷದಲ್ಲಿ ಆ ಕೆಲಸವನ್ನು ತೆಗೆದುಕೊಂಡು ಮಾಡುತ್ತೇವೆ. ಯಾವ ಇರಾಖೆಯಿಂದಲೇ ಆಗಲೀ ಅಲ್ಲಿ ಅಂಥ ಕಟ್ಟಡಗಳ ಅವಶ್ಯಕತೆ ಇದೆ ಎನ್ನುವ ಮನವಿ ಬಂದಿಲ್ಲ. ಆ ಕಾರಣದಿಂದ ಇದುವರೆಗೂ ಕಟ್ಟುವುದಕ್ಕೆ ಸಾಧ್ಯವಾಗಿಲ್ಲ.

ಶ್ರೀ ವಿ. ಎಲ್. ಶಿವಪ್ಪ.—ಅಲ್ಲಿ ಎಲ್ಲಾ ಇರಾಖೆಗಳೂ ಇವೆ, ಹೈಸ್ಕೂಲಿವೆ, ಪ್ರೈಮರಿ ಹೆಲ್ತ್ ಯೂನಿಟ್ ಇದೆ. ಆದರೆ ಅಲ್ಲಿ ವಾಸಮಾಡಲು ಮನೆ ಸಿಕ್ಕದೆ 12 ಮೈಲಿಗಳಿಂದ ಬರಬೇಕಾಗಿದೆ. ಈ ದೃಷ್ಟಿಯಿಂದ ಇರಾಖೆಗಳಿಂದ ಅವಶ್ಯಕತೆ ತಿಳಿದುಕೊಂಡು ಮನೆಗಳನ್ನು ಕಟ್ಟಿಸಿಕೊಡುತ್ತೀರಾ?

ಶ್ರೀ ಕೆ. ಲಕ್ಕಪ್ಪ.—ಯಾವ ಇರಾಖೆಯಿಂದಲೂ ಮನೆಗಳನ್ನು ತಮ್ಮ ನೌಕರರಿಗೆ ಕಟ್ಟಿಸಿ ಕೊಡಬೇಕೆಂದು ಮನವಿ ಬಂದಿಲ್ಲ. ಬಂದರೆ ಕಟ್ಟಿಕೊಡುತ್ತೇವೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಬಿಳಿಗಿರಿ ಗ್ರಾಮ ಮಾದರಿ ಗ್ರಾಮವೆಂದು ಹೆಸರು ಗಳಿಸಿದೆ. ಆದುದರಿಂದ ಗ್ರಾಮಾಂತರ ಪ್ರದೇಶಗಳಿಗೆ ಆ ಗ್ರಾಮವನ್ನು ಮಾದರಿಯಾಗಿ ಮಾಡಲು ಅಲ್ಲಿ ಮನೆಗಳನ್ನು ಕಟ್ಟಿಸಿಕೊಡುತ್ತೀರಾ?

ಶ್ರೀ ಕೆ. ಲಕ್ಕಪ್ಪ.—ಅದು ಮಾದರಿ ಗ್ರಾಮವಿರಬಹುದು. ಮನವಿ ಬಂದರೆ ಮನೆಗಳನ್ನು ಕಟ್ಟಿಸಿಕೊಡುತ್ತೇವೆ. ಯಾವ ಇರಾಖೆಯಿಂದಲೂ ಕೂಡ ಇದುವರೆಗೆ ಮನವಿ ಬಂದಿಲ್ಲ.